

ನಾಟಕ ಆರಂಭವಾಗುತ್ತೆ. ಕಲಾಭಿಮಾನಿಗಳು ಸಹಕರಿಸಬೇಕು ಅಂತ ಮೈಕಿನಲ್ಲೇ ಹೇಳುತ್ತಲೇ ಇದ್ದರು.

ಪೊಲೀಸ್ ಪರ್ಮಿಷನ್ ಸಿಕ್ಕಿದೆ ಎನ್ನುತ್ತ ಬಾಬಣ್ಣ ತನ್ನ ಫೋನಲ್ಲಿದ್ದ ವಾಟ್ಸಾಪ್ ಫೋಟೊ ತೋರಿಸಿದರೂ ಸೆಕ್ಷನ್ ಆಫೀಸರ್ ಕರೆಂಟು ಕೊಡಲು ಒಪ್ಪಲಿಲ್ಲ. ಒರಿಜಿನಲ್ ಹಾರ್ಡ್ ಕಾಪಿ ಕೊಡಬೇಕು ಅಂತ ಕೊಕ್ಕೆ ಮುಂದುವರಿಸಿದ. ಏನು ಕೊಡಬೇಕೊ ಹೇಳಿ, ಕೊಡ್ತೀವಿ ಅಂತ ಬಾಬಣ್ಣ ಹೇಳುತ್ತಿದ್ದಂತೆ ಕರೆಂಟು ಹೋಯಿತು. ವೋಲ್ಟೇಜು ಜಾಸ್ತಿಯಾಗಿರಬಹುದು ಅಂತ ಲೈನ್ ಮನ್‌ಗಳು ಟ್ರಾನ್ಸ್‌ಫಾರ್ಮರ್ ಕಡೆಗೆ ಓಡಿದರು.

ಈ ಸಲವೂ ನಾಟಕ ನಡೆಯದಿದ್ದರೆ ಸ್ವಾಮಿಯ ಸಿಟ್ಟು ಮುಂದುವರಿಯುತ್ತೆ ಅಂತ ಊರವರು ಚಡಪಡಿಸಿದರು. ಹತ್ತತ್ತು ನಿಮಿಷಕ್ಕೆ ಸೀನನಿಗೆ ಫೋನ್ ಮಾಡಿ ಎಲ್ಲಿದ್ದೀಯಾ ಅಂತ ಬಾಬಣ್ಣ ಕೇಳುತ್ತಲೇ ಇದ್ದ. ಅಷ್ಟರಲ್ಲಿ ಬಿದರಳ್ಳಿ ಎಸ್ಸೈ ಸವಾರಿ ಆಗಮಿಸಿತು. ನಾಟಕ ಆಡ್ತೀವಿ ಅಂತ ನಂಗೆ ಯಾರೂ ಹೇಳಿಲ್ಲ. ಇಲ್ಲಿನ ಲಾ ಅಂಡ್ ಆರ್ಡರ್ ಜವಾಬ್ದಾರಿ ನಂದು. ಏನಾದರೂ ಹೆಚ್ಚುಕಮ್ಮಿ ಆದ್ರೆ ಎಸ್‌ಪಿ ಸಾಹೇಬರಿಗೆ ನಾನು ಉತ್ತರ ಹೇಳಬೇಕಾಗುತ್ತೆ ಅಂತ ಯಾರನ್ನೂ ಉದ್ದೇಶಿಸದೆ ಎಸ್ಸೈ ರೋಫ್ ಹಾಕಿದ.

ಹನ್ನೊಂದೂವರೆ ಆದರೂ ಕರೆಂಟು ಬರಲಿಲ್ಲ. ಜನ ತಾಳ್ಮೆ ಕಳೆದುಕೊಂಡರು. ಕರೆಂಟು ಕೊಡದಿದ್ದರೆ ಊರ ಜನ ಸುಮ್ಮನಿರಲ್ಲ ಅಂತ ಸೆಕ್ಷನ್ ಆಫೀಸರಿಗೆ ಮನದಟ್ಟಾಯಿತು. ಅಷ್ಟರಲ್ಲಿ ಸೀನ ಬಂದ ಅಂತ ಯಾರೋ ಕೂಗಿದರು. ಅವನು ತಂದ ಪರ್ಮಿಷನ್ ಲೆಟರ್ ತೋರಿಸಿದ ಮೇಲೂ ಸೆಕ್ಷನ್ ಆಫೀಸರ್ ಮತ್ತು ಎಎಸ್ಸೈಗೆ ತಲಾ ಎಂಟು, ಪೀಸಿಗಳು, ಲೈನ್‌ಮನ್‌ಗಳಿಗೆ ತಲಾ ಎರಡು ಸಾವಿರ ಕೊಟ್ಟ ಮೇಲೆ ಕರೆಂಟು ಬಂತು.

ಕರೆಂಟು ಬರುವ ಮೊದಲೇ ಮೇಷ್ಟ್ರು ಮಂದ ಬೆಳಕಿನಲ್ಲೇ ಲೆಗ್ ಹಾರ್ಮೋನಿಯಂ ತುಳಿಯುತ್ತ ಗಣ ಸ್ತುತಿ ಶುರು ಮಾಡಿದ್ದರು. ಅಷ್ಟರಲ್ಲಿ ಕರೆಂಟು ಬಂತು. ಪಲ್ಲವಿಯ ಜತೆಗೆ ಎರಡು ಚರಣ ಹಾಡಿಸಿ ಪರದೆ ಎತ್ತಿಸಿದರು. ಝಗ ಮಗ ಹೊಳೆಯುತ್ತಿದ್ದ ಸ್ಟೇಜಿನ ಮೇಲೆ ಎಲ್ಲಾ ಪಾತ್ರಧಾರಿಗಳು ನಿಂತು ಕೈಮುಗಿದುಕೊಂಡು ನಮೋ ನಮೋ ಶನಿ ದೇವ, ನಮೋ ನಮೋ ಸೂರ್ಯ ತೇಜ ಅನ್ನೋ ನಾಂದಿಪದ್ಯ ಶುರು ಮಾಡಿದರು. ಮೇಷ್ಟ್ರಿಗೆ ನೆಮ್ಮದಿ ಅನ್ನಿಸಿತು. ಸ್ಟೇಜಿನ ಬಲಕ್ಕೆ ಇರಿಸಿದ್ದ ಶನಿ ಮಹಾತ್ಮನ ಪೋಸ್ಟರಿನ ಕಡೆ ನೋಡಿದರು. ಅಲ್ಲಿದ್ದ ಸ್ವಾಮಿ ಅವರ ಕಡೆ ನೋಡಿ ನಕ್ಕಂತೆ ಭಾಸವಾಯಿತು. ●